


### ಕಿರುತೆರೆಗೆ ಸಿನಿಮಾದವರ ಲಗ್ಗೆ

ಸಿನಿಮಾ ನಟ–ನಟಿಯರು ಕಿರುತೆರೆಗೆ 'ಠೀವಿ'ಯಿಂದ ಬರುತ್ತಿರುವ ಬಗ್ಗೆ ಎನ್.ವಿಶಾಖರ ಲೇಖನ ಗಮನ ಸೆಳೆಯಿತು.

–ಪಿ.ಗೋವಿಂದರಾಜ್, ಶಿವಮೊಗ್ಗ/ ಎಸ್.ಲಕ್ಷ್ಮಿನರಸಿಂಹ, ಚಾಮರಾಜನಗರ

### ಏಣಿ ಏರಿದ ಮೇಲೆ ಬೇಡ!

ಬಹುತೇಕ ಚಲನಚಿತ್ರಗಳು ಕಳಪೆ, ನೋಡಲು ಯಾರೂ ಹೋಗುತ್ತಿಲ್ಲ. ಮನೆಯಲ್ಲೇ ಕುಳಿತು ಟಿ.ವಿ ನೋಡುವವರೇ ಹೆಚ್ಚು. ಹಾಗಾಗಿಯೇ ಸಿನಿಮಾ ನಟ–ನಟಿಯರು ಟಿ.ವಿಗೆ ಬರಲು ಇಷ್ಟಪಡುತ್ತಾರೆ! ಆದರೆ ಟಿ.ವಿಯಿಂದಲೇ ಮೇಲೆ ಬಂದ ಅಚ್ಯುತನಂತಹವರು ಏಣಿಯನ್ನು ಏರಿದ ಮೇಲೆ ಅದರ ಹಂಗೇಕೆ ಎಂದು ಟಿ.ವಿ ಅಲ್ಲಗಳೆಯುವುದು ಸರಿಯಲ್ಲ.

– ವಿಭಾ ಮುರಳೀಧರ್, ತುಮಕೂರು/ ಕೆ.ಎಸ್.ಚಂದ್ರ, ಕೌಡ್ಲೆ/ ಎಚ್.ಎಸ್.ನಾಗರಾಜ, ಬೆಂಗಳೂರು

### ಶುಕ್ಲಪಕ್ಷವಲ್ಲ, ಕೃಷ್ಣಪಕ್ಷ

'ಕೊಳಲನೂದುತ ಬಂದ' ಲೇಖನದಲ್ಲಿ ಎನ್.ಎಸ್. ಶಾರದ ಶ್ರಾವಣ ಬಹುಳ ಶುಕ್ಲಪಕ್ಷ ಎಂದು ತಿಳಿಸಿದ್ದಾರೆ. ಆದರೆ ಬಹುಳ ಎಂದರೆ ಕೃಷ್ಣಪಕ್ಷ; ಶುಕ್ಲಪಕ್ಷವಲ್ಲ.

–ಗುಬ್ಬಿ ರೇವಣಾರಾಧ್ಯ, ಬೆಂಗಳೂರು

### ಕೃಷ್ಣಾಷ್ಟಮಿ ಹಬ್ಬದ ವಿಶೇಷ

ವೈಷ್ಣವರೆಲ್ಲರೂ ಕೃಷ್ಣಪಕ್ಷದ ಅಷ್ಟಮಿಯಂದೇ ಕೃಷ್ಣಾಷ್ಟಮಿ ಹಬ್ಬ ಆಚರಿಸುತ್ತಾರೆ. ಆದರೆ ಇದರಲ್ಲಿ ಕೆಲವರು ಸಿಂಹಮಾಸದಲ್ಲಿ ಬರುವ ಕೃಷ್ಣಪಕ್ಷದ ಅಷ್ಟಮಿಯಂದು ಆಚರಿಸುತ್ತಾರೆ.

ಸಿಂಹ ಮಾಸದಲ್ಲಿ ಮಾತ್ರ ಕೃಷ್ಣಪಕ್ಷದ ಅಷ್ಟಮಿಯೂ ರೋಹಿಣಿ ನಕ್ಷತ್ರವೂ ಒಟ್ಟೊಟ್ಟಿಗೆ ಬರುತ್ತವೆ. (ರಾತ್ರಿ ಚಂದ್ರೋದಯದ ಹೊತ್ತಿಗೆ ಈ ತಿಥಿ ನಕ್ಷತ್ರ ಯೋಗವಿರಬೇಕು.) 2–3 ವರ್ಷಗಳಿಗೊಮ್ಮೆ ಶ್ರಾವಣದ ಕೃಷ್ಣಾಷ್ಟಮಿ ಕರ್ಕಾಟಕ ಮಾಸದಲ್ಲಿ ಬರುತ್ತದೆ. ಸಿಂಹ ಮಾಸದಲ್ಲಿ ಭಾದ್ರಪದ ಕೃಷ್ಣಾಷ್ಟಮಿ ಇರುತ್ತದೆ. ಹೀಗೆ ಹಬ್ಬ ಆಚರಣೆಯ ದಿನಗಳಲ್ಲಿ ವ್ಯತ್ಯಾಸವಾಗುತ್ತದೆ.

–ಅಜಾರು ನಾಗರಾಜ ರಾಯ, ಕಟೀಲು

### ಇಂತದ್ದೂ ಇದೆಯೇ?

ಯೋಗೀಂದ್ರ ಮರವಂತೆ 'ವೆನಿಸ್ ಸುತ್ತಿ ಬಂದ ಮೇಲೆ' ಲೇಖನದಲ್ಲಿ ತಿಳಿಸಿದಂತೆ, ಅಲ್ಲಿ ಮನೆ ಹೊರಗೆ ಕಾಲಿಡುತ್ತಿದ್ದಂತೆ ದೋಣಿಯೇ ಆಧಾರ ಎಂದು ತಿಳಿದು ಸೋಜಿಗವಾಗಿ ಭೂಮಿಯ ಮೇಲೆ ಇಂತದ್ದೂ ಸ್ಥಳ ಒಂದಿದೆಯೇ ಎನ್ನಿಸಿತು!

–ಪಿ.ಎನ್. ಶ್ರೀವತ್ಸ, ಬೆಂಗಳೂರು/ ಎಚ್.ಎಂ.ಕಾಳಮ್ಮ, ಬಸರಕೋಡು

### ಹೊಸ ಅನುಭವ

'ಹಾವಕ್ಕಿಯ ಹಾವಭಾವ' ಪುಟ್ಟರಾಜು ಕೈಗಾರ ಚಿತ್ರ–ಲೇಖನ ಏನೋ ಒಂದು ರೀತಿಯ ಹೊಸದನ್ನು ತೆರದಿಟ್ಟಂತಾಯಿತು.

–ಎಚ್. ಆನಂದ್ ಕುಮಾರ್, ಚಿತ್ರದುರ್ಗ

### ಪಶುಗಳು!

'ಅಜ್ಜಿಗೆ ಕೋಡು' (ವಂಡರ್‌ಪುಟ, ವಿದ್ಯಾ ಹಾಲಭಾವಿ). ಎಲ್ಲರಿಗೂ ಹಾಗೆ ಕೋಡು ಮತ್ತು ಬಾಲ ಕೂಡ ಮೂಡುವುದಾದರೆ 'ಸಾಕ್ಷಾತ್ ಪಶುಃ ಪುಚ್ಛ ವಿಷಾಣ ಹೀನಃ' (ಬಾಲ, ಕೊಂಬುಗಳಿಲ್ಲದ ಪಶುವೇ ಸರಿ) ಎಂಬ ಸುಭಾಷಿತ ಸುಳ್ಳಾಗಬಹುದು!

–ಸಿಪಿಕೆ, ಮೈಸೂರು

### ಅಜ್ಜಿಗೆ ಕೋಡು ಬರಲಿ ಬಿಡಿ!

ನೂರೊಂದರ ಅಜ್ಜಿ ಎಡಗಡೆ ಕೋಡು ಬೆಳೆಸಿಕೊಂಡಿರುವುದು ಮೇಲ್ನೋಟಕ್ಕೆ ವಿಶೇಷವೆನಿಸುತ್ತದೆ.

ಚರ್ಮದ ಕೆಳಭಾಗದಲ್ಲಿ ನೂರುಗಟ್ಟಲೆ ಸೆಬೇಷಿಯಸ್ ಗ್ರಂಥಿಗಳಿರುತ್ತವೆ. ಇವುಗಳಲ್ಲಿ ಉತ್ಪತ್ತಿಯಾಗುವ ವಸ್ತುವು ಕೊಬ್ಬಿನ ತರಹ ಇರುತ್ತದೆ ಹಾಗೂ ಇದರ ನಾಳವು ಚರ್ಮದ ಮೇಲೆ ಕಾಣುವ ಕೂದಲಿನ ಬುಡಕ್ಕೆ ಸೇರುತ್ತದೆ. ದೇಹದ ಉಷ್ಣ ನಿಯಂತ್ರಣದಲ್ಲಿ ಈ ಗ್ರಂಥಿಗಳು ಪ್ರಮುಖ ಪಾತ್ರ ವಹಿಸುತ್ತವೆ.

ಗ್ರಂಥಿಯ ನಾಳದಲ್ಲಿ ಅಡಚಣೆಯುಂಟಾದರೆ 'ಸೆಬಮ್' ಎಂದು ಕರೆಯಲ್ಪಡುವ ಈ ವಸ್ತು ಅಲ್ಲಿಯೇ ಉಳಿದು 'ಸೆಬೇಷಿಯಸ್ ಸಿಸ್ಟ್' ಆಗುತ್ತದೆ. ವರ್ಷಾನುಗಟ್ಟಲೆ ಹಾಗೆಯೇ ಉಳಿಯುವ ಸಿಸ್ಟ್ ಕೊಂಬಿನ ರೂಪ ತಾಳಬಹುದು. ನೂರೊಂದು ಹರೆಯದ ಅಜ್ಜಿ ಕೋಡನ್ನು ತೋರಿಸಿ ಮರೆಯುವುದು ತಪ್ಪೇನಲ್ಲ!

–ಡಾ. ಕೆ.ಕೆ. ಜಯಚಂದ್ರ ಗುಪ್ತ, ಹಾಸನ


ಪುರುಷರಲ್ಲಿ ಲೈಂಗಿಕ ಕಾರ್ಯಾಚರಣೆಯ ತೊಂದರೆಯು

ಅವರ ದೈಹಿಕ ಹಾಗೂ ಮಾನಸಿಕ ಆರೋಗ್ಯಕ್ಕೆ ಕೂಡಾ ತೊಂದರೆ ಉಂಟು ಮಾಡಬಹುದು!

ಡಾಮಿಯಾಪ್ಲಾಂಟ್®




ಎಲ್ಲಾ ಪ್ರಮುಖ ಹೋಮಿಯೋಪಥಿ ಔಷಧ ಅಂಗಡಿಗಳಲ್ಲಿ ಲಭ್ಯವಿದೆ

**Karnataka Ph:** 080-2346199, 09845046286, 09880907512, 09341123199, 0832-2264634, 09945423916

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: **ಡಾ. ವಿಲ್ಮಾರ್ ಶ್ವಾಬ್ ಇಂಡಿಯಾ ಪ್ರೈ.ಲಿ.**

ಗ್ರಾಹಕ ಸೇವೆ ಸಂಖ್ಯೆ: **0120–4016500** ಅಥವಾ

ಲಾಗ್ ಆನ್ ಮಾಡಿ: **www.schwabeindia.com**

'SCHWDAM' ಎಂದು 575758 ಗೆ ಎಸ್‌ಎಂಎಸ್ ಮಾಡಿ

ನಿಮ್ಮ ವೈದ್ಯರನ್ನು ಸಂಪರ್ಕಿಸಿ

SCHWABE

ಶ್ವಾಬ್ – ಜರ್ಮನಿಗೆ ಸೇರಿದ, ವಿಶ್ವದಲ್ಲೇ ಅತಿ ದೊಡ್ಡ ಮತ್ತು ಅತ್ಯಂತ ಭರವಸೆಯುಳ್ಳ ಹೋಮಿಯೋಪಥಿ ಔಷಧಗಳ ತಯಾರಕರು.